# ಪ್ರಿಯಾಂಕಾ ಯಾನ

ಕಿರುತೆರೆಯಿಂದ ಸಿನಿಮಾರಂಗದೆಡೆಗೆ ಹೊರಳಿರುವ ನಟಿ ಪ್ರಿಯಾಂಕಾ ಕುಮಾರ್, ಮಂಸೋರೆ ನಿರ್ದೇಶನದ 'ದೂರ ತೀರ ಯಾನ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಪ್ರಯೋಗಾತ್ಮಕ ಸಿನಿಮಾಗಳ ಭಾಗವಾಗುವ ಅಭಿಲಾಷೆ ಹೊಂದಿರುವ ಅವರು, 'ಸುಧಾ'ದೊಂದಿಗೆ ತಮ್ಮ ಮನಸಿನ ಮಾತುಗಳನ್ನು ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್



◆ 'ದೂರ ತೀರ ಯಾನ' ಸಿನಿಮಾ ಹಾಗೂ ನಿಮ್ಮ ಪಾತ್ರದ ಬಗ್ಗೆ ಹೇಳಿ?

'ದೂರ ತೀರ ಯಾನ' ಒಂದು ಮ್ಯೂಸಿಕಲ್ ಲವ್ ಸ್ಟೋರಿ. ಈಗಿನ ಕಾಲದ ಸಂಬಂಧಗಳು ಹಾಗೂ ಆ ಸಂಬಂಧಗಳು ಸೋಲಲು ಕಾರಣಗಳ ಮೂಲ ಹಿಡಿದು ಮೂಡಿರುವ ಸುಂದರ ಪ್ರೇಮಕಥೆ ಎಂದು ಹೇಳಬಹುದು. ವಾಸ್ತವಕ್ಕೆ ಹತ್ತಿರವಿರುವ ತಾಜಾ ಕಥೆ. ಸಿನಿಮಾದಲ್ಲಿ ನಾನು ಕೊಳಲು ನುಡಿಸುತ್ತೇನೆ, ಹೀರೊ ವಯೊಲಿನ್ ನುಡಿಸುತ್ತಾರೆ.

ಸದ್ಯ ಸಿನಿಮಾಗೆ ಸಿದ್ಧತೆ ನಡೆಯುತ್ತಿದೆ. ಒಂದು ವಾರ ಕೊಳಲು ತರಗತಿಗೆ ಹೋಗಿದ್ದೆ. ಈಗ ಪಾತ್ರ ನಿರ್ವಹಣೆ ಕುರಿತಂತೆ ವರ್ಕ್‌ಶಾಪ್ ನಡೆಯುತ್ತಿದೆ. ಜನರು ಒಂದು ಸುಂದರ ಪ್ರೇಮಕಥೆಯನ್ನು ನಿರೀಕ್ಷಿಸಬಹುದು.

◆ ನಟನೆಯೆಡೆಗೆ ಆಸಕ್ತಿ ಚಿಗುರಿದ್ದು ಯಾವಾಗ? ಹೇಗೆ?

ಚಿಕ್ಕವಯಸ್ಸಿನಲ್ಲೇ ನಟನೆ ಬಗ್ಗೆ ಒಂದು ಸೆಳೆತ ಆರಂಭವಾಗಿತ್ತು. ನಮಗೆ ಆಗ ಟೀವಿ ನೋಡಲು ಬಿಡುತ್ತಿರಲಿಲ್ಲ. ಆದರೆ ವಾರಾಂತ್ಯದಲ್ಲಿ ನಾಟಕಗಳನ್ನು ತೋರಿಸುತ್ತಿದ್ದರು. ಅಲ್ಲಿಂದ ನನಗೆ ನಟನೆ ಬಗ್ಗೆ ಆಸಕ್ತಿ ಶುರುವಾಯಿತು. ನಟನೆಯನ್ನೇ ವೃತ್ತಿಯನ್ನಾಗಿ ತೆಗೆದುಕೊಳ್ಳಬೇಕು ಎಂದು ಪಿಯುಸಿಯಲ್ಲಿದ್ದಾಗಲೇ ಧಾರಾವಾಹಿಗೆಂದು ಆಡಿಷನ್ ಕೊಡಲು ಶುರು ಮಾಡಿದೆ. ಕನ್ನಡದಲ್ಲಿ ಒಂದು ಧಾರಾವಾಹಿಯಲ್ಲಿ ನಟಿಸಿದೆ. ನಂತರ ಸಂಪೂರ್ಣವಾಗಿ ತಮಿಳು ಧಾರಾವಾಹಿಗಳಲ್ಲಿ ತೊಡಗಿಕೊಂಡೆ. ಸುಮಾರು ಮೂರು ವರ್ಷ ಅಲ್ಲಿದ್ದೆ. ಆನಂತರ ಸಿನಿಮಾರಂಗದೆಡೆಗೆ ಬರಬೇಕೆಂದುಕೊಂಡೆ. 'ಬ್ಯಾಡ್ ಮ್ಯಾನರ್ಸ್' ಸಿನಿಮಾದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡೆ. ಸೂರಿ ಸರ್ ಅವರ ಸಿನಿಮಾದಲ್ಲಿ ಕೆಲಸ ಮಾಡಿದ್ದೆ ಎಂಬ ಖುಷಿ ನನ್ನದು. ಆಮೇಲೆ ಮತ್ತೊಂದು ಸಿನಿಮಾ ಅವಕಾಶ ದೊರೆಯಿತು. ಈಗ ಮಂಸೋರೆ ಅವರ 'ದೂರ ತೀರ ಯಾನ' ಸಿನಿಮಾದಲ್ಲಿ ನಟಿಸುತ್ತಿದ್ದೇನೆ.

◆ ಕಿರುತೆರೆ ಕೊಟ್ಟ ಅನುಭವಗಳು?

ಕಿರುತೆರೆಯಿಂದ ಹಲವು ಪಾಠಗಳನ್ನು ಕಲಿತಿದ್ದೇನೆ. ಏನೂ ತರಬೇತಿಯಿಲ್ಲದೆ ಕ್ಯಾಮೆರಾ ಮುಂದೆ ನಿಂತಿದ್ದವಳಿಗೆ ನಟನೆಯ ಮೂಲ ಪಾಠಗಳನ್ನು ಕಿರುತೆರೆ ಹೇಳಿಕೊಟ್ಟಿತು. ಕನ್ನಡದಲ್ಲಿ ಕೇವಲ ಆರು ತಿಂಗಳು ಕಿರುತೆರೆಯಲ್ಲಿದ್ದೆ. ಆನಂತರ ತಮಿಳು ಕಿರುತೆರೆಯಲ್ಲಿ ತೊಡಗಿಕೊಂಡೆ. ಅಲ್ಲಿ ಕೂಡ ಸಾಕಷ್ಟು ಅನುಭವಗಳನ್ನು ಪಡೆದುಕೊಂಡೆ. ಸಿನಿಮಾದೆಡೆಗೆ ಹೊರಳಲು ಕಿರುತೆರೆಯೇ ನನಗೆ ಮೆಟ್ಟಿಲಾಯಿತು.

◆ ಯಾವ ರೀತಿಯ ಪಾತ್ರ, ಸಿನಿಮಾಗಳ ನಿರೀಕ್ಷೆ ನಿಮ್ಮದು?

ಇಂಥದ್ದೇ ಪಾತ್ರ ಬೇಕೆನ್ನುವ ನಿರೀಕ್ಷೆ ನನಗಿಲ್ಲ. ಹೊಸಬಳಾಗಿ ನನಗೆ ಆಯ್ಕೆಗಳೂ ಸೀಮಿತ. ಆದರೆ ಬಂದ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವೆ. ಸ್ಕ್ರೀನ್ ಸ್ಪೇಸ್ ಚೆನ್ನಾಗಿರಬೇಕು. ಜನರಿಗೆ ಇಷ್ಟವಾಗುವಂಥ ಸಿನಿಮಾಗಳನ್ನು ಕೊಡಬೇಕು. ಈಗೀಗ ಕನ್ನಡದಲ್ಲಿ ಪ್ರಯೋಗಾತ್ಮಕ ಸಿನಿಮಾಗಳು ಹೆಚ್ಚೆಚ್ಚು ಬರುತ್ತಿವೆ. ಅಂಥ ಪ್ರಯೋಗಾತ್ಮಕ ಸಿನಿಮಾಗಳ ಭಾಗವಾಗಬೇಕು ಎನ್ನುವ ಅಭಿಲಾಷೆ ನನ್ನದು. ಈಗ ಅಂಥದ್ದೊಂದು ಅವಕಾಶ ದೊರೆತಿದೆ.

◆ ಸದ್ಯ ಯಾವ ಸಿನಿಮಾಗಳಲ್ಲಿ ತೊಡಗಿದ್ದೀರಿ?

ನಾನು ನಟಿಸಿರುವ 'ರುದ್ರ ಗರುಡ ಪುರಾಣ' ಸಿನಿಮಾ ಬಿಡುಗಡೆಯಾಗಬೇಕಿದೆ. ಸದ್ಯ 'ದೂರ ತೀರ ಯಾನ' ಸಿನಿಮಾದಲ್ಲಿ ತೊಡಗಿಕೊಂಡಿದ್ದೇನೆ. ■